## 2

# ಜಲಪ್ರಳಯದ ನಂತರದ ಕಾಲಾವಧಿ

## ಜಲಪ್ರಳಯದಿಂದ ಅಬ್ರಹಾಮನ ಕರೆಯುವಿಕೆಯ ವರೆಗೆ

## ಕ್ರಿ.ಪೂ. 2348-1921 (ಆದಿಕಾಂಡ 8:10-11:26)

**1. ಎರಡನೆಯ ಪ್ರಾರಂಭ** (ಆದಿಕಾಂಡ 8:15-9:29).-ನೋಹನ ನಾವೆಯು ಜನಾಂಗದ ಎರಡನೆಯ ತೊಟ್ಟಿಲು ಆಯಿತು. ಅದರಿಂದ ನೋಹ ಮತ್ತು ಅವನ ಕುಟುಂಬವು ಒಂದು ನೂತನ ಜೀವಿಸುವಿಕೆಗೆ ಹೊರಟಿತು.

*a. ಯಜ್ಞವೇದಿ ಮತ್ತು ಒಡಂಬಡಿಕೆ.*-ನೋಹನು ಎಲ್ಲಾ ಶುದ್ಧ ಪಶುಗಳಲ್ಲಿ ಏಳೇಳು ಗಂಡು ಹೆಣ್ಣುಗಳನ್ನು ಕಾಪಾಡಿ ಇಟ್ಟಿದ್ದನು. ನಾವೆಯನ್ನು ಬಿಟ್ಟು ಬಂದ ನಂತರ ಅವನು ಮಾಡಿದ ಮೊದಲನೆಯ ಕಾರ್ಯವು ದೇವರಿಗೋಸ್ಕರ ಯಜ್ಞ ವೇದಿಯನ್ನು ಮಾಡಿ ಶುದ್ಧವಾದ ಎಲ್ಲಾ ಪಶುಪಕ್ಷಿ ಜಾತಿಗಳಲ್ಲಿ ಸರ್ವಾಂಗ ಹೋಮ ಮಾಡಿದ್ದು. ಅವನ ಆರಾಧನೆಯನ್ನು ಸ್ವೀಕರಿಸುವಲ್ಲಿ ದೇವರು ನೋಹನೊಂದಿಗೆ ಒಂದು ಒಡಂಬಡಿಕೆಯನ್ನು ಮಾಡುತ್ತಾನೆ, ಮತ್ತು ವಾಗ್ದಾನದ ತನ್ನ ಸುಂದರವಾದ ಮುಗಿಲುಬಿಲ್ಲಿನೊಂದಿಗೆ ಅದಕ್ಕೆ ಮುದ್ರೆ ಹಾಕುತ್ತಾನೆ, ಒಡಂಬಡಿಕೆಯ ಮುಖ್ಯ ಅಂಶಗಳು ಹೀಗಿದ್ದವು: (1) ಇನ್ನು ಮುಂದೆ ಜಲಪ್ರಳಯವಿರುವುದಿಲ್ಲ; (2) ಮನುಷ್ಯನು ವೃದ್ಧಿಗೊಂಡು ಭೂಮಿಯನ್ನು ತುಂಬಿಕೊಳ್ಳಬೇಕು; (3) ಪ್ರಾಣಿ ಆಹಾರ ದೃಢಪಡಿಸಲ್ಪಟ್ಟಿತು; (4) ಕೊಲೆಗೆ ಮರಣ ದಂಡನೆಯು ಮಾನವ ಜೀವಿತದ ಪರಿಶುದ್ಧತೆಯನ್ನು ಜಾರಿಗೆ ತಂದಿತು.

*b. ನೋಹನ ಗಂಡುಮಕ್ಕಳ ಪರಿಸ್ಥಿತಿ.*-ನೋಹನ ಚರಿತ್ರೆಯ ಮುಕ್ತಾಯ ಘಟನೆಗಳು: ನೋಹನು ಮದ್ಯಪಾನದಿಂದ ಮತ್ತನಾದದ್ದು, ಹಾಮನ ನಾಚಿಕೆಯಿಲ್ಲದ ಅಗೌರವ, ಮತ್ತು ಶೇಮ ಹಾಗೂ ಯೆಫೆತರ ಗೌರವದ ನಡತೆ. ಸ್ವಾಭಾವಿಕವಾದ ವಿರೋಧಗಳು ಅವನ ಭಿನ್ನವಾದ ಅಂತಿಮ ಸ್ಥಿತಿಗಳ ಬಗ್ಗೆ ನೋಹನ ಪ್ರವಾದಿಕ ಚಿತ್ರಣಗಳಾದವು: (1) ಕಾನಾನ ಶಾಪ (ಹಾಮನ ಕುಲ), (2) ಶೇಮನ ಆಶೀರ್ವಾದ, (3) ಯೆಫೆತನ ವಿಸ್ತರಣೆ.

**2. ಜನಾಂಗಗಳ ಉತ್ಪತ್ತಿ** (ಆದಿಕಾಂಡ 10).-ಆದಿಕಾಂಡದ ಹತ್ತನೆಯ ಅಧ್ಯಾಯವು ವಂಶಾವಳಿ ಶಾಸ್ತ್ರದ ಮೇಲೆ ಅಧಿಕೃತತೆಯಾಗಿದೆ. ಅದು ನೋಹನ ಗಂಡುಮಕ್ಕಳ ವಂಶಜರನ್ನು ಮತ್ತು ಅವರ ವರ್ಗೀಕರಣವನ್ನು ಕೊಡುತ್ತದೆ. (1) ಹಾಮನಿಗೆ ನಾಲ್ಕು ಗಂಡು ಮಕ್ಕಳು, ಅವರು ಕೆಳಗಿನ ಯೂಫ್ರೇಟೀಸ್ ಮತ್ತು ನೈಲ್‌ನದಿಗಳ ಕೊಳ್ಳಗಳಲ್ಲಿ ನೆಲೆಸಿದ್ದರು. ಅತೀ ಪುರಾತನ ಸಂಸ್ಕೃತಿಗಳು ಹಾಮನವರವಾಗಿದ್ದವು. (2) ಶೇಮನ ಐದು ಜನ ಮಕ್ಕಳು ಸೌತ್ ವೆಸ್ಟರ್ನ್ - ಏಶಿಯಾದಲ್ಲಿ ನೆಲೆಸಿದರು. ಅವರು ಯೂಫ್ರೇಟೀಸ್‌ನ ಮೇಲಿನ ಮೊದಲಿನ ಹಾಮಿಟಿಕ್ ಕುಲವನ್ನು ಜಯಿಸಿದ ಕಲ್ದೀಯರ ಪೂರ್ವಜರಾಗಿದ್ದರು; ಅಸ್ಸೀರಿಯನ್ನರು, ಸಿರಿಯನ್ನರು, ಅರೇಬಿಯನ್ನರು ಮತ್ತು ಇಬ್ರೀಯರು. ಇವರು ಮುಂದಿನ ಸಾಮ್ರಾಜ್ಯಗಳ ದೊಡ್ಡ ಗುಂಪನ್ನು ಸ್ಥಾಪಿಸಿದರು. (3) ಯೆಫೆತನಿಗೆ ಏಳು ಜನ ಗಂಡು ಮಕ್ಕಳು, ಅವರಿಂದ ಮೇದ್ಯರು, ಗ್ರೀಕರು, ರೋಮನ್ನರು ಮತ್ತು ಯುರೋಪಿನ

ಆಧುನಿಕ ಎಲ್ಲಾ ಜನಾಂಗಗಳು ಹುಟ್ಟಿ ಬಂದವು. ದೂರದೂರದಲ್ಲಿ ಚದರಿಹೋದವು, ಸಾವಿರಾರು ವರ್ಷಗಳವರೆಗೆ ಗಣನೆಗೆ ಬಾರದವುಗಳಾಗಿದ್ದವು, ಆದರೆ ಇಪ್ಪತ್ನಾಲ್ಕು ನೂರು ವರ್ಷಗಳವರೆಗೆ ಜಗತ್ತಿನ ಆಳಿನಡಿಸುವ ಜನಾಂಗಗಳಾಗಿದ್ದವು.

**3. ಬಾಬೇಲ್ ಗೋಪುರ ಮತ್ತು ಭಾಷೆಗಳ ಗಲಿಬಿಲಿ** (ಆದಿಕಾಂಡ 11:1-9).-ಶತಮಾನಗಳು ದಾಟಿಹೋಗುತ್ತವೆ. ಜನಸಂಖ್ಯೆಯು ಯೂಫ್ರೇಟೀಸಿನ ಕೆಲಭಾಗದಲ್ಲಿ ಶಿನಾರಿನಲ್ಲಿ ಕೇಂದ್ರೀಕರಿಸಲು ಪ್ರಾರಂಭವಾಯಿತು. ದೊಡ್ಡ ಹೆಸರನ್ನು ಪಡೆಯುವುದಕ್ಕಾಗಿ ಮತ್ತು ಚದರಿಹೋಗುವುದನ್ನು ತಪ್ಪಿಸಿಕೊಳ್ಳುವುದಕ್ಕಾಗಿ ಒಂದು ದೊಡ್ಡ ಗೋಪುರವನ್ನು ಕಟ್ಟುವುದಕ್ಕಾಗಿ ಅವರು ಪ್ರಾರಂಭಿಸಿದರು. ನೋಹನೊಂದಿಗೆ ಮಾಡಿಕೊಂಡ ಒಡಂಬಡಿಕೆಯಲ್ಲಿ ದೇವರ ಯೋಜನೆಯು ವ್ಯಕ್ತಿಪಡಿಸಲ್ಪಟ್ಟಿತು, ಅದು ಜನರು ಚದರಿ ಹೋಗಿ ಭೂಮಿಯನ್ನು ತುಂಬಿಕೊಳ್ಳುವುದಾಗಿತ್ತು, ಅದರ ಪಾಪವು ಅವರ ಗೋಪುರ ದಲ್ಲಿ ಇರಲಿಲ್ಲ, ಆದರೆ ಅವರ ಹೃದಯಗಳಲ್ಲಿತ್ತು. ಅವರು ಚದರಿ ಹೋಗುವಂತೆ ಅವರ ಮಾತುಗಳನ್ನು ಗಲಿಬಿಲಿಗೊಳಿಸುವುದರಿಂದ ದೇವರು ಅವರ ಉದ್ದೇಶವನ್ನು ಸೋಲಿ ಸಿದನು. ಇದರಿಂದ ಬಾಬೆಲ್, ಗಲಿಬಿಲಿ ಎಂದು ಹೆಸರಾಯಿತು.

**4. ಶೇಮನ ವಂಶದವರು** (ಆದಿಕಾಂಡ 11:10-26).-ಈ ವಚನಗಳು ಐದನೆಯ ಆಧ್ಯಾಯದ ಪ್ರತಿರೂಪವನ್ನು ಮತ್ತು ಮುಕ್ತಾಯಗೊಳ್ಳುವುದನ್ನು ಒಳಗೊಂಡಿರುತ್ತದೆ. ಅದು ಸೇತನ ವಂಶಾವಳಿಯನ್ನು ಆದಾಮನಿಂದ ನೋಹನವರೆಗೆ ಒಳಗೊಂಡು ಕೊಡುತ್ತದೆ, ಇದು ಶೇಮನ ವಂಶಾವಳಿಯನ್ನು ಅಬ್ರಹಾಮನವರೆಗೆ ಒಳಗೊಂಡು ಕೊಡುತ್ತದೆ. ಪ್ರತಿಯೊಂದು ವಂಶಾವಳಿಯು ಹತ್ತು ಹೆಸರುಗಳನ್ನು ಒಳಗೊಂಡಿರುತ್ತದೆ, ಈ ವಂಶಾವಳಿಯ ದಾಖಲೆಗಳು ಕುಟುಂಬ ದಾಖಲೆಗಳಿಗಿಂತ ಎಷ್ಟೋ ಹೆಚ್ಚಾದವುಗ ಳಾಗಿರುತ್ತವೆ. ಅವು ಬೈಬಲ್ ಚರಿತ್ರೆಯ ಪ್ರಾಥಮಿಕ ಉದ್ದೇಶದೊಂದಿಗೆ ನಿಕಟವಾಗಿ ಸಂಬಂಧಿಸುತ್ತವೆ. ಆ ಉದ್ದೇಶವು ನಿಜವಾದ ಧರ್ಮದ ಉದಯವನ್ನೂ ಬೆಳವಣಿಗೆ ಯನ್ನೂ ಗುರುತಿಸುವುದಾಗಿದೆ. ಆ ಬೆಳವಣಿಗೆಯು ವಾಗ್ದಾನದ ಮಾರ್ಗವನ್ನು ಅನುಸರಿಸುತ್ತದೆ, ಅದು ವಿಶ್ವಾಸದ ಪುರುಷರ ಮಾರ್ಗವೂ ಆಗಿರುತ್ತದೆ. ವಾಗ್ದತ್ತ ಮೆಸ್ಸೀಯನು ಮೊಬ್ಬಾದ ಮತ್ತು ಮಾರ್ಗದ ದೂರದ ಅಂತ್ಯದಲ್ಲಿಯ ನಿರೀಕ್ಷೆಯ ನಕ್ಷತ್ರವಾಗಿದ್ದಾನೆ; ಹನೋಕ ಮತ್ತು ನೋಹ ಹಾಗೂ ಅಬ್ರಹಾಮರು ಈ ಪುರಾತನ ಶತಮಾನಗಳ ಮೊಬ್ಬಾದ ಮಟ್ಟಕ್ಕಿಂತ ಹೆಚ್ಚು ಮೇಲೆ ಇದ್ದ ಶೂರ ವ್ಯಕ್ತಿಗಳಾಗಿದ್ದಾರೆ.

© 2009 Truth for Today